# Anti Land-Grabbing Action Committee
# ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ

No. 759, 5th Main, 8th Cross, R.T.Nagar, II Block, Bangalore 560032 Ph: 094481 20305

10/10/2014

ಯಿಂದ,
ಡಾ. ಹೆಚ್.ಎಸ್. ದೊರೆಸ್ವಾಮಿ,
ಧರಣಿ ಸ್ಥಳ, ಪುರಭವನದ ಮುಂಭಾಗ,ಬೆಂಗಳೂರು

ಗೆ,
ಮುಖ್ಯಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ, ಬೆಂಗಳೂರು.

13/10/14
Office of the Chief Secretary
to Government of Karnataka
Vidhana Soudha, Bangalore-560 001

. ಮಾನ್ಯರೆ,

ಶ್ರೀ ಎ.ಟಿ.ರಾಮಸ್ವಾಮಿ ನೇತೃತ್ವದ ಜಂಟಿ ಸದನ ಸಮಿತಿಯು 2007 ರಲ್ಲಿ ಭೂಕಬಳಿಕೆಯ (ಸರ್ಕಾರಿ ಜಮೀನಿಗೆ ಸುಳ್ಳು ದಾಖಲೆ ಸೃಷ್ಟಿಸಿ) ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮ ವರದಿಯಲ್ಲಿ ಪ್ರಸ್ತಾಪಿಸಿರುತ್ತಾರೆ. ಆದುದರಿಂದ ತಮ್ಮ ಕಚೇರಿಯ ವ್ಯಾಪ್ತಿಗೆ ಸೇರಿದ ಈ ಕೆಳಕಂಡ ಮಾಹಿತಿಯನ್ನು ಒದಗಿಸಬೇಕೆಂದು ಕೋರುತ್ತೇವೆ **(ದಿ 1/11/2007 ರಿಂದ ಇಲ್ಲಿಯವರೆಗೆ)**. ಈ ಪತ್ರವನ್ನು ಮತ್ತು ಅಧಿಹೋರಾಟದ ಬೆಳವಣಿಗೆಗಳ ಬಗ್ಗೆ ಇತರ ಮಾಹಿತಿಗಳನ್ನು ಸಾರ್ವಜನಿಕರಿಗೆ/ಮಾಧ್ಯಮಗಳಿಗೆ ನೇರವಾಗಿ ತಿಳಿಸಲು **http://savekarnataka.in** ನಲ್ಲಿ ಹಾಕಲಾಗುವುದು. ಬಹು ಮುಖ್ಯವಾಗಿ ಅಮಾಯಕ ಜನರು ಸರ್ಕಾರದ ಇಲಾಖೆಗಳೇ ದೃಢಪಡಿಸಿರುವ ನಕಲೀ ದಾಖಲೆಗಳಿಂದ ಮೋಸಹೋಗಿ, ಜೀವಾವಧಿ ದುಡಿದು ಕೂಡಿಟ್ಟ ಹಣವನ್ನು ಕಳೆದುಕೊಳ್ಳುವುದನ್ನು ಇನ್ನು ಮುಂದೆಯಾದರೂ ತಪ್ಪಿಸಲು ಜಾಗೃತಿ ಮೂಡಿಸಲಾಗುವುದು. ಭೂಗಳ್ಳರ ವಿರುದ್ಧ ಮತ್ತು ಭೂಗಳ್ಳರನ್ನು ರಕ್ಷಿಸುತ್ತಿರುವ ಸಂಬಂಧಿಸಿದ ಸರ್ಕಾರದ ಎಲ್ಲಾ ಮಂತ್ರಿಗಳು(ಮುಖ್ಯಮಂತ್ರಿಗಳನ್ನೊಳಗೊಂಡಂತೆ). ಸಂಬಂಧಿಸಿದ ಸರ್ಕಾರದ ಎಲ್ಲಾ ಅಧಿಕಾರಿಗಳ (ಮುಖ್ಯಕಾರ್ಯದರ್ಶಿಗಳನ್ನೊಳಗೊಂಡಂತೆ) ಮೇಲೆ ವಿವಿಧ ಕಾಯ್ದೆಗಳ ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಲು ಆ ಕೆಳಗಿನ ಮಾಹಿತಿಗಳನ್ನು ಕೂಡಲೇ ನೀಡುವುದು.

1. ದಿ 1/11/2007 ರಿಂದ ಇಲ್ಲಿಯವರೆಗೆ ತಾವು ಮತ್ತು ತಮ್ಮ ಹುದ್ದೆಯಲ್ಲಿದ್ದ ಹಿಂದಿನ ಮುಖ್ಯ ಕಾರ್ಯದರ್ಶಿಗಳು ಶ್ರೀ ಎ ಟಿ ರಾಮಸ್ವಾಮಿ ವರದಿ ಪ್ರಕಾರ ಭೂಕಬಳಿಕೆಯಾದ ಸರ್ಕಾರಿ ಜಾಗಗಳನ್ನು ವಾಪಸ್ ಪಡೆಯಲು ಮತ್ತು ಅದರಲ್ಲಿ ಶಾಮೀಲಾದ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಮೇಲೆ ಕ್ರಮ ಜರುಗಿಸುವ ಬಗ್ಗೆ ತೆಗೆದುಕೊಂಡ ಪ್ರತಿ ಸಭೆಯ ನಡವಳಿಕೆಗಳು, ಪತ್ರಗಳು ಮತ್ತು ಅದಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ನೀಡುವುದು
2. ದಿ 1/11/2007 ರಿಂದ ಇಲ್ಲಿಯವರೆಗೆ ತಾವು ಮತ್ತು ತಮ್ಮ ಹುದ್ದೆಯಲ್ಲಿದ್ದ ಹಿಂದಿನ ಮುಖ್ಯ ಕಾರ್ಯದರ್ಶಿಗಳು ಶ್ರೀ ಎ ಟಿ ರಾಮಸ್ವಾಮಿ ವರದಿ ಪ್ರಕಾರ ಭೂಕಬಳಿಕೆಯಾದ ಸರ್ಕಾರಿ ಜಾಗಗಳನ್ನು ವಾಪಸ್ ಪಡೆಯಲು ಮತ್ತು ಅದರಲ್ಲಿ ಶಾಮೀಲಾದ ಅಧಿಕಾರಿಗಳು ಮತ್ತು ಸಿಬ್ಬಂದಿ ಗಳ ಮೇಲೆ ಕ್ರಮ ಜರುಗಿಸುವ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ . ಸಂಬಂದಿಸಿದ ಮಂತ್ರಿಗಳಿಗೆ ಯಾವುದೇ ರೀತಿಯಲ್ಲಿ ಲಿಖಿತ ರೂಪದಲ್ಲಿ ಕೊಟ್ಟ ಸಲಹೆ/ಟಿಪ್ಪಣಿಗಳ ಪ್ರತಿ ನೀಡುವುದು

3. ದಿ 1/11/2007 ರಿಂದ ಇಲ್ಲಿಯವರಗೆ ತಾವು ಮತ್ತು ತಮ್ಮ ಹುದ್ದೆಯಲ್ಲಿದ್ದ ಹಿಂದಿನ ಮುಖ್ಯ ಕಾರ್ಯದರ್ಶಿಗಳು ಶ್ರೀ ಎ ಟಿ ರಾಮಸ್ವಾಮಿ ವರದಿ ಪ್ರಕಾರ ಭೂಕಬಳಿಕೆಯಾದ ಸರ್ಕಾರಿ ಜಾಗಗಳನ್ನು ವಾಪಸ್ ಪಡೆಯಲು ಮತ್ತು ಅದರಲ್ಲಿ ಶಾಮೀಲಾದ ಅಧಿಕಾರಿಗಳು ಮತ್ತು ಸಿಬ್ಬಂದಿ ಗಳ ಮೇಲೆ ಕ್ರಮ ಜರುಗಿಸುವ ಬಗ್ಗೆ ವಿವಿಧ ಇಲಾಖೆಗಳಿಗೆ, ಪ್ರಾಧಿಕಾರಗಳಿಗೆ, ಸಂಸ್ಥೆಗಳಿಗೆ ಮತ್ತು ಪಾಲಿಕೆಗಳಿಗೆ ಕೊಟ್ಟ ಪತ್ರಗಳ/ಸೂಚನೆಗಳು/ನಿರ್ದೇಶನಗಳ ಪ್ರತಿ ನೀಡುವುದು.

4. ದಿ 1/11/2007 ರಿಂದ ಇಲ್ಲಿಯವರಗೆ ತಾವು ಮತ್ತು ತಮ್ಮ ಹುದ್ದೆಯಲ್ಲಿದ್ದ ಹಿಂದಿನ ಮುಖ್ಯ ಕಾರ್ಯದರ್ಶಿಗಳು ಶ್ರೀ ಎ ಟಿ ರಾಮಸ್ವಾಮಿ ವರದಿ ಪ್ರಕಾರ ಭೂಕಬಳಿಕೆಯಾದ ಸರ್ಕಾರಿ ಜಾಗಗಳನ್ನು ವಾಪಸ್ ಪಡೆಯಲು ಮತ್ತು ಅದರಲ್ಲಿ ಶಾಮೀಲಾದ ಅಧಿಕಾರಿಗಳು ಮತ್ತು ಸಿಬ್ಬಂದಿ ಗಳ ಮೇಲೆ ಕ್ರಮ ಜರುಗಿಸುವ ಬಗ್ಗೆ ರಾಜ್ಯ ಸಚಿವ ಸಂಪುಟದ ಮುಂದೆ ಮಂಡಿಸಿದ ಟಿಪ್ಪಣಿಗಳ ಮತ್ತು ರಾಜ್ಯ ಸಚಿವ ಸಂಪುಟದ ತೀರ್ಮಾನಗಳ ಪ್ರತಿ ನೀಡುವುದು

5. ದಿ 1/11/2007 ರಿಂದ ಇಲ್ಲಿಯವರಗೆ ತಮಗೆ ಮತ್ತು ತಮ್ಮ ಹುದ್ದೆಯಲ್ಲಿದ್ದ ಹಿಂದಿನ ಮುಖ್ಯ ಕಾರ್ಯದರ್ಶಿಗಳಿಗೆ ವಿವಿಧ ರೀತಿಯ ಅಕ್ರಮಗಳಲ್ಲಿ ಭಾಗಿಯಾಗಿರುವ/ಭಾಗಿಯಾಗಿದ್ದ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಗುರುತರ ಹುದ್ದೆ ಕೊಡುವುದನ್ನು ತಪ್ಪಿಸಲು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಯಾವುದೇ ರೀತಿಯಲ್ಲಿ ಲಿಖಿತ ರೂಪದಲ್ಲಿ ಕೊಟ್ಟ ಸಲಹೆಗಳ ಪ್ರತಿ ನೀಡುವುದು.

6. ದಿ 1/11/2007 ರಿಂದ ಇಲ್ಲಿಯವರಗೆ ತಮಗೆ ಮತ್ತು ತಮ್ಮ ಹುದ್ದೆಯಲ್ಲಿದ್ದ ಹಿಂದಿನ ಮುಖ್ಯ ಕಾರ್ಯದರ್ಶಿಗಳಿಗೆ ವಿವಿಧ ರೀತಿಯ ಅಕ್ರಮಗಳಲ್ಲಿ ಭಾಗಿಯಾಗಿರುವ/ಭಾಗಿಯಾಗಿದ್ದ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಗುರುತರ ಹುದ್ದೆ ಕೊಡುವುದನ್ನು ತಪ್ಪಿಸಲು ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳಿಂದ ಬಂದ ಪ್ರತಿಯೊಂದು ಪತ್ರಗಳ ಪ್ರತಿ ನೀಡುವುದು

7. ದಿ 1/11/2007 ರಿಂದ ಇಲ್ಲಿಯವರಗೆ ತಾವು ಮತ್ತು ತಮ್ಮ ಹುದ್ದೆಯಲ್ಲಿದ್ದ ಹಿಂದಿನ ಮುಖ್ಯ ಕಾರ್ಯದರ್ಶಿಗಳಿಗೆ ಅಧಿಕಾರಿಗಳಿಂದ, ಕೋರ್ಟ್, ಟ್ರಿಬ್ಯೂನಲ್, ಸಂಘ, ಸಂಸ್ಥೆ ಇತ್ಯಾದಿಗಳಿಂದ ಭೂಮಿ ಕಬಳಿಕೆ ವಿರುದ್ಧ ಬಂದ ಪ್ರತಿ ಪತ್ರದ/ ಆದೇಶಗಳ ಪ್ರತಿ ನೀಡುವುದು

8. ದಿ 1/11/2007 ರಿಂದ ಇಲ್ಲಿಯವರಗೆ ತಾವು ಮತ್ತು ತಮ್ಮ ಹುದ್ದೆಯಲ್ಲಿದ್ದ ಹಿಂದಿನ ಮುಖ್ಯ ಕಾರ್ಯದರ್ಶಿಗಳಿಗೆ ಸಾರ್ವಜನಿಕರಿಂದ, ಸಂಘ, ಸಂಸ್ಥೆಗಳಿಂದ ಇತ್ಯಾದಿ ಭೂಮಿ ಕಬಳಿಕೆ ವಿರುದ್ಧ ಬಂದ ಪ್ರತೀ ದೂರಿನ ಪ್ರತಿ ನೀಡುವುದು

9. ಸಾರ್ವಜನಿಕರು ಮೋಸಹೋಗದಂತೆ ಸಾರ್ವಜನಿಕರಿಗೆ ಮೀಸಲಾಗಿಡಬೇಕಾದ ಸ್ಥಳಗಳನ್ನು ಖಾಸಗಿ ಉಪಯೋಗಕ್ಕೆ ಬಳಸಿಕೊಂಡಿರುವ ಜಾಗದ ವಿವರಗಳನ್ನು(ಸಾರ್ವಜನಿಕರು ಮತ್ತೆ ಮೋಸಹೋಗದಿರಲು) ಕರ್ನಾಟಕ ಸರ್ಕಾರದ ವೆಬ್ ಸೈಟಿನಲ್ಲಿ ಮತ್ತು ಪತ್ರಿಕಾ ಪ್ರಕಟಣೆಯ ಮೂಲಕ ಪ್ರಕಟಿಸಲಾಗಿದೆಯೇ? ಪ್ರಕಟಿಸಿದ್ದರೆ ಅದರ ಮಾಹಿತಿ ಕೊಡುವುದು. ಈವರೆಗೂ ಪ್ರಕಟಿಸಿಲ್ಲದಿದ್ದರೆ ಕಾರಣಗಳೇನು? ಪ್ರಕಟಿಸಿಲ್ಲದಿದ್ದರೆ ಅತೀಶೀಘ್ರದಲ್ಲೇ ಅದನ್ನು ಪ್ರಕಟಿಸಲು ಕ್ರಮ ಕೈಗೊಳ್ಳುವುದರ ಬಗ್ಗೆ ಯಾವ ಕಾಲಮಿತಿಯಲ್ಲಿ ಮಾಡಲಾಗುವುದೆಂದು ಮಾಹಿತಿ ನೀಡುವುದು

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿಗಳು

ಎಚ್. ಎಸ್. ದೊರೆಸ್ವಾಮಿ